# ನಕ್ಕುಬಿಡಿ..!

ಅಪ್ಪ: ಮಗಳೆ ಮೊದಲು ಅಪ್ಪ ಅಂತಾ ಕರೆಯುತ್ತಿದೆ, ಈಗ ಡ್ಯಾಡಿ ಅಂತಾ ಕರೆಯುತ್ತಿಯಾ?

ಮಗಳು: ಅಪ್ಪ ಅಂತಾ ಕರೆದರೆ ತುಟಿಗೆ ತುಟಿ ಟಚ್ ಆಗಿ ಲಿಫ್‌ಸ್ಟಿಕ್ ಹಾಳಾಗುತ್ತೆ, ಡ್ಯಾಡಿ.

★★★



ಗುರು: ಎಲ್ಲರೂ ಕ್ರಿಕೆಟ್ ಪಂದ್ಯದ ಮೇಲೆ ಪ್ರಬಂಧ ಬರೆಯಿರಿ.

ಗುಂಡ: ಬರೆಯದೆ ಸುಮ್ಮನೆ ಕುಳಿತಿದ್ದ.

ಗುರು: ಏಕೆ ಪ್ರಬಂಧ ಬರೆಯದೆ ಸುಮ್ಮನೆ ಕುಳಿತ್ತಿದ್ದಿಯಾ?

ಗುಂಡ: ಮಳೆಯಿಂದ ಪಂದ್ಯ ರದ್ದಾಗಿದೆ ಸಾರ್.

★★★

ವಿದೇಶಿ: ಇಲ್ಲಿ ಯಾರಾದರೂ ದೊಡ್ಡ ಮನುಷ್ಯರು ಹುಟ್ಟಿದ್ದಾರೆಯೆ?

ಗುಂಡ: ಇಲ್ಲ, ಇಲ್ಲಿ ಹುಟ್ಟುವುದೆಲ್ಲಾ ಬರೀ ಸಣ್ಣ ಮಕ್ಕಳು.

★★★

ಪೆದ್ದ: ನೀನು ಊಟ ಮಾಡುವ ಮೊದಲು ದೇವರಲ್ಲಿ ಪ್ರಾರ್ಥಿಸುತ್ತಿಯಾ?

ಸಿದ್ದ: ನನ್ನ ಹೆಂಡತಿಗೆ ಚೆನ್ನಾಗಿ ಅಡುಗೆ ಮಾಡಲು ಬರುತ್ತದೆ.

★★★





ಹೆಂಡತಿ: ಏನ್ರೀ ಇತ್ತೀಚಿಗೆ ಕುರುಡ ಭಿಕ್ಷುಕರು ಮೋಸ ಮಾಡುವುದನ್ನು ಕಲಿತಿದ್ದಾರೆ?

ಗಂಡ: ಹೇಗೆ?

ಹೆಂಡತಿ: 'ದೇವರು ನಿನಗೆ ಒಳ್ಳೆಯದನ್ನು ಮಾಡಲಿ ಬ್ಯೂಟಿಫುಲ್ ಲೇಡಿ' ಅಂತಾ ಅಶೀರ್ವಾದ ಮಾಡ್ದ.

ಗಂಡ: ನಿಜವಾಗಲೂ ಅವನು ಕುರುಡ. ಅದಕ್ಕೆ ಕಣೇ ಅವನು ನಿನ್ನನ್ನು ಸುಂದರವಾಗಿದ್ದಿಯಾ ಅಂದಿದ್ದು!

ಹೆಂಡತಿ: ಅಂಗಡಿಗೆ ಹೋಗಿ ಸಕ್ಕರೆ ತೆಗೆದುಕೊಂಡು ಬನ್ನಿ. ಸಕ್ಕರೆ ಖಾಲಿಯಾಗಿದೆ.

ಗಂಡ: ನಿನ್ನ ತುಟಿಯಲ್ಲೇ ಅಷ್ಟೊಂದು ಸಿಹಿಯಿರುವಾಗ ಸಕ್ಕರೆ ಏಕೆ ಬೇಕು ಚಿನ್ನಾ?

ಹೆಂಡತಿ: ನಿಮಗಾದರೆ ಓಕೆ, ನಿಮ್ಮ ಗೆಳೆಯರೂ ಬರುತ್ತಾರಲ್ಲಾ?

★★★

## ಆಟೋ ಹಿಂದೆ ಕಾಣಿಸಿದ್ದು

★ ಲವ್ ಮಾಡಿದ್ರೆ ರೋಮಾನ್ಸ್,
ಕೈ ಕೊಟ್ರೆ ನಿಮಾನ್ಸ್.

★ ಕಣ್ಣು ಮುಚ್ಚಿದರೆ ಕಾಡುವವಳು
ಬಿಟ್ಟರೆ ಓಡುವವಳು.

★ ಹಾರುವ ಹಕ್ಕಿಗೆ ಅಲಂಕಾರ
ಪ್ರೀತಿಸುವ ಹುಡುಗಿಗೆ ದುರಂಕಾರ

★ ಮನಸಿಗೆ ಬಂದವಳು
ಮನೆಗೆ ಬರುತ್ತಾಳಾ?

★ ಕಾಯಿಸುವ ಹೆಣ್ಣನ್ನು
ಪ್ರೀತಿಸಬಾರದು; ಪ್ರೀತಿಸುವ
ಹೆಣ್ಣನ್ನು ಕಾಯಿಸಬಾರದು.

ಸಂಗ್ರಹ: ಎಂ.ಎಸ್. ಧರ್ಮೇಂದ್ರ

ಜಾಹೀರಾತು

ಸ್ವಾಭಿಮಾನಿ 'ಅರಸಿ'ಯ ಭಾವಲೋಕ

ಸೂಜಿಯ ಭಾವಲೋಕದಲ್ಲಿ ಹೊಯ್ದಾಟ ತುಯ್ದಾಟ.

ಸೋಮ-ಶುಕ್ರ ರಾತ್ರಿ 7:30ಕ್ಕೆ ಜೀ ಕನ್ನಡ ವಾಹಿನಿಯಲ್ಲಿ 'ಅರಸಿ'.